

# ವಿಶ್ವಮಾನವ ವಿವೇಕಾನಂದ

**ಎನ್. ಕೃಷ್ಣಸ್ವಾಮಿ**

> ಸ್ವಾಮಿ ವಿವೇಕಾನಂದರ ವ್ಯಕ್ತಿತ್ವದ ಹಲವು ಮುಖಗಳನ್ನೂ ಅವರ ವಿಶ್ವಪ್ರೇಮವನ್ನೂ ವರ್ಣಿಸಿರುವ ಪ್ರೊ. ಎನ್. ಕೃಷ್ಣಸ್ವಾಮಿಯವರು ಬೆಂಗಳೂರಿನಲ್ಲಿರುವ ವಿವೇಕಾನಂದ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿಗಳಾಗಿದ್ದಾರೆ.

**ಸ್ವಾಮಿ ವಿವೇಕಾನಂದರ ಜೀವನವನ್ನು ಅಧ್ಯಯನ ಮಾಡಿದಾಗ ಅವರ ವ್ಯಕ್ತಿತ್ವದ ಹಲವು ಮುಖಗಳನ್ನು ಕಾಣುತ್ತೇವೆ. ಭಕ್ತನಾಗಿ, ಯೋಗಿಯಾಗಿ, ಜ್ಞಾನಿಯಾಗಿ, ರಾಷ್ಟ್ರಪ್ರೇಮಿಯಾಗಿ, ತನ್ನ ತಾಯಿಯ ಪ್ರೀತಿಯ ಮಗನಾಗಿ, ಗುರುವಿಗೆ ಶ್ರದ್ಧಾವಂತ ಶಿಷ್ಯನಾಗಿ, ಇದೆಲ್ಲವನ್ನೂ ಮೀರಿದಂತೆ ಒಬ್ಬ ವಿಶ್ವಮಾನವನಾಗಿ ಅವರನ್ನು ಕಾಣಬಹುದು. ಅವರ ವ್ಯಕ್ತಿತ್ವ ಇವೆಲ್ಲವನ್ನೂ ಒಳಗೊಂಡು ಇವೆಲ್ಲವನ್ನೂ ಮೀರಿ ಮಿಂಚುತ್ತದೆ.**

### ವಿಶ್ವನಾಥದತ್ತನ ಮಗ

ಯುವಕ ನರೇಂದ್ರನು ಗುರು ಶ್ರೀರಾಮಕೃಷ್ಣರ ಬಳಿಗೆ ಹೋಗಿದ್ದಾಗ ಒಮ್ಮೆ ಅವರು ಅವನನ್ನು ಸ್ಪರ್ಶಿಸಿದರು. ಆಗ ಅವನಿಗೆ ಅಲೌಕಿಕ ಅನುಭವವಾಗಿ ತನ್ನತನವೇ ಕರಗುತ್ತಿರುವಂತೆ ಆಯಿತು. 'ಇದೇನು ನೀವು ಮಾಡುತ್ತಿರುವುದು? ನನಗೆ ಮನೆಯಲ್ಲಿ ತಂದೆ ತಾಯಿ ಇದ್ದಾರೆ' ಎಂದು ಉದ್ಗರಿಸುತ್ತಾನೆ. ಆಗ ಪರಮಹಂಸರು ಅವನನ್ನು ಪೂರ್ವಸ್ಥಿತಿಗೇ ಕರೆದು ತರುತ್ತಾರೆ. ನರೇಂದ್ರನಿಗೆ ತನ್ನ ಮಾತಾಪಿತೃಗಳ ಮೇಲೆ ಅಪಾರ ಪ್ರೇಮ, ಹೆಮ್ಮೆ ಇದ್ದಿತು. ಸಂನ್ಯಾಸಿಯಾದ ಮೇಲೆಯೂ ವಿವೇಕಾನಂದರು ಸಾಧ್ಯವಾದಾಗಲೆಲ್ಲ ತಮ್ಮ ತಾಯಿಯ ಯೋಗಕ್ಷೇಮದ ವಿಷಯದಲ್ಲಿ ಕಾಳಜಿ ವಹಿಸುವುದನ್ನು ನೋಡಬಹುದು. ಖೇತಡಿಯ ಮಹಾರಾಜರಿಗೆ ಬರೆದ ಪತ್ರದಲ್ಲಿ ತಾಯಿಯನ್ನು ನೋಡಿಕೊಳ್ಳುವಂತೆ ಕೇಳಿಕೊಳ್ಳುತ್ತಾರೆ, ಆ ಶಿಷ್ಯರೂ ಗುರುಮಾತೆಯ ಸೇವೆಯನ್ನು ಮಾಡುತ್ತಾರೆ.

### ಮಠದ ನಾಯಕ

೧೮೮೫ರಲ್ಲಿ ಗುರು ರಾಮಕೃಷ್ಣರನ್ನು ಗಂಟಲು ಬೇನೆಯ ಚಿಕಿತ್ಸೆಗಾಗಿ ಕಲ್ಕತ್ತೆಯ ಶ್ಯಾಮಪುಕುರಕ್ಕೆ ಮೊದಲು, ಆಮೇಲೆ ಕಾಶೀಪುರದ ಉದ್ಯಾನ ಗೃಹಕ್ಕೆ ಕರೆತರಲಾಗುತ್ತದೆ. ಅವರ ಶುಶ್ರೂಷೆಯ ಪೂರ್ಣ ಮೇಲ್ವಿಚಾರಣೆಯನ್ನು ನರೇಂದ್ರನು ನೋಡಿಕೊಳ್ಳುತ್ತಾನೆ. 'ನರೇಂದ್ರ ಗುರುವಿಗಾಗಿ ಮಾಡಿದ ಬಲಿದಾನ, ಅವನ ಸ್ಫೂರ್ತಿಜನಕ ಮಾತುಗಳು, ತಮ್ಮೊಡನೆ ಅವನು ಸೇರಿದುದು ಯುವಕರ ಮೇಲೆ ಅಳಿಸಲಾಗದ ಪ್ರಭಾವ ಉಂಟು ಮಾಡುತ್ತವೆ' (*Life of Sri Ramakrishna* ಪುಟ.೪೨೪). ಅವರು ದೇಹತ್ಯಾಗ ಮಾಡುವ ಎರಡುಮೂರು ದಿನ ಮೊದಲು ತಮ್ಮ ಶಕ್ತಿಯನ್ನೆಲ್ಲಾ ನರೇಂದ್ರನಿಗೆ ಕೊಟ್ಟು ಹೇಳುತ್ತಾರೆ : 'ಇವತ್ತು ನನ್ನ ಸರ್ವಸ್ವವನ್ನೂ ನಿನಗೆ ಕೊಟ್ಟಿದ್ದೇನೆ, ನಾನು ಫಕೀರನಾಗಿದ್ದೇನೆ ! ಈ ಶಕ್ತಿಯಿಂದ ನೀನು ಪ್ರಪಂಚಕ್ಕೆ ಹೆಚ್ಚಿನ ಒಳಿತನ್ನು ಮಾಡುವೆ, ಅದನ್ನು ಮಾಡಿಯೇ ನೀನು ಹಿಂದಿರುಗುವೆ.' (*Life of Sri Ramakarishna* ಪುಟ.೪೫೫). ಶ್ರೀರಾಮಕೃಷ್ಣರ ದೇಹಾವಸಾನದ ನಂತರ ಎರಡು ವರ್ಷ ನರೇಂದ್ರ ಮತ್ತು ಇತರ ಯುವಕ



*ವಿಶ್ವಧರ್ಮ ಸಮ್ಮೇಳನದ ಪ್ರತಿನಿಧಿಯಾಗಿ ಸ್ವಾಮಿ ವಿವೇಕಾನಂದರು*

ಶಿಷ್ಯರು ಮನೆ ಬಿಟ್ಟು ಬಂದು ಒಂದು ಪಾಳುಮನೆಯಲ್ಲಿ ವಾಸಮಾಡಲಾರಂಭಿಸಿದರು. ಅದೇ ಮುಂದೆ ಬಾರಾನಗರ ಮಠ ಎಂದು ಪ್ರಸಿದ್ಧವಾಯಿತು. ಇಲ್ಲಿ ನರೇಂದ್ರ ತನ್ನ ಕುಟುಂಬದಿಂದ ಹೊರಬಂದು ಪರಮಹಂಸರ ಬೃಹತ್ಕುಟುಂಬದ ಜವಾಬ್ದಾರಿ ಹೊರುವುದನ್ನು ನಾವು ನೋಡಬಹುದು.

## ಪರಿವ್ರಾಜಕ

೧೮೮೮ರಿಂದ ನಾಲ್ಕೈದು ವರ್ಷ ವಿವೇಕಾನಂದರು ಪರಿವ್ರಾಜಕರಾಗಿ ಭಾರತದ ಮೂಲೆ ಮೂಲೆಗಳಲ್ಲಿ, ನಗರ-ಅರಣ್ಯಗಳಲ್ಲಿ, ಗ್ರಾಮಗಳಲ್ಲಿ, ಪರ್ವತ ಕಂದರಗಳಲ್ಲಿ ಸಂಚರಿಸಿದರು. ಭಾರತದ ಸಾಮಾನ್ಯ ಜನರ, ರಾಜ ಮಹಾರಾಜರ, ಧೀಮಂತ ವ್ಯಕ್ತಿಗಳ ಪರಿಚಯ ಅವರಿಗೆ ಆಯಿತು. ಸಂವೇದನಾಶಕ್ತಿ ಹೊಂದಿದ್ದ ಅವರಿಗೆ ಭಾರತದ ಜನತೆಯ ಪರಿಸ್ಥಿತಿಯ ಅರಿವು ಉಂಟಾಯಿತು. ದರಿದ್ರರ ದುಃಖ ತಾಪಗಳು ಅವರ ಮನಸ್ಸಿಗೆ ಯಾತನೆ ಉಂಟುಮಾಡಿದವು. ಈಗ ಭಾರತದ ಉದ್ಧಾರ ಹೇಗೆ ಆದೀತು ಎಂಬ ಯೋಚನೆ ಅವರನ್ನು ಆವರಿಸಿತು.

## ಕನ್ಯಾಕುಮಾರಿಯಲ್ಲಿ

ಡಿಸೆಂಬರ್ ೧೮೯೨ರಲ್ಲಿ ವಿವೇಕಾನಂದರು ತಿರುವನಂತಪುರದಿಂದ ನಾಗರಕೋಯಿಲಿಗೆ ಹೋದರು. ಅಲ್ಲಿಂದ ಕನ್ಯಾಕುಮಾರಿಗೆ ಹನ್ನೆರಡು ಮೈಲು ಕಾಲುನಡಿಗೆಯಲ್ಲಿ ಹೋದರು. ದೇವಿಯ ದರ್ಶನ ಮಾಡಿಕೊಂಡು ಸಮುದ್ರದಲ್ಲಿ ಎರಡು ಫರ್ಲಾಂಗ್ ದೂರದಲ್ಲಿರುವ ಬಂಡೆಗೆ ಈಜಿಕೊಂಡು ಹೋದರು. ಕ್ರಿಸ್‌ಮಸ್ ರಾತ್ರಿಯನ್ನು ಆ ಬಂಡೆಯ ಮೇಲೆಯೇ ಆಳವಾದ ಧ್ಯಾನದಲ್ಲಿ ಕಳೆದರು. ಆ ಸ್ಥಳ ಈಗ ವಿವೇಕಾನಂದ ರಾಕ್ ಮೆಮೋರಿಯಲ್ ಎಂದು ಪ್ರಸಿದ್ಧವಾಗಿದೆ.

ಅಲ್ಲಿ ಯುವಕ ನರೇಂದ್ರ ರಾಷ್ಟ್ರಭಕ್ತ ವಿವೇಕಾನಂದರಾಗಿ, ಪ್ರಪಂಚದ ಸುಧಾರಕನಾಗಿ ಪರವರ್ತಿತನಾಗಿರುವುದು ಕಾಣುತ್ತದೆ. ಆಗ ಅವರಿಗೆ ತಮ್ಮ ಕುಟುಂಬದ ಚಿಂತೆ, ಬಾರಾನಗರಮಠದ ಚಿಂತೆ ಇಲ್ಲ. ಭರತಖಂಡದ, ಇಡೀ ವಿಶ್ವದ ಭೂತ, ವರ್ತಮಾನ, ಭವಿಷ್ಯಗಳನ್ನು ಕುರಿತು ಯೋಚಿಸುತ್ತಾರೆ. ಆ ಬಂಡೆಯ ಮೇಲೆ ಭಾರತ ಹೇಗೆ ತನ್ನ ಉನ್ನತ ಸ್ಥಾನದಿಂದ ಅವನತಿಗೆ ಜಾರಿತೆಂಬುದು ಅವರಿಗೆ ಸ್ಪಷ್ಟವಾಗಿ ಕಾಣುತ್ತದೆ. ಭಾರತದ ಸಂಸ್ಕೃತಿಯ ಸತ್ವ, ಸತ್ಯಗಳನ್ನು ಕುರಿತು ಅವರು ಧ್ಯಾನಿಸುತ್ತಾರೆ—ಧರ್ಮವೇ ಭಾರತದ ಜೀವ ಎಂದು ಅರಿಯುತ್ತಾರೆ. ಉನ್ನತ ಆಧ್ಯಾತ್ಮಿಕ ಚೈತನ್ಯದ ಪುನರ್ನವೀಕರಣದಿಂದಲೇ, ಪುನರುತ್ಥಾನದಿಂದಲೇ ಭಾರತದ ಉದ್ಧಾರ, ಎಂದು ನಿಶ್ಚಯವಾಗುತ್ತದೆ. ಇದಕ್ಕೆ ಹೆಚ್ಚು ಧನಸಹಾಯದ ಅಗತ್ಯ ಇದೆ. ಭಾರತದಲ್ಲಿ ಈ ಧನ ಸಿಗುವುದಿಲ್ಲ—ಬರೀ ಬಾಯಿಮಾತಿನಿಂದ ಕೆಲಸ ಆಗುವುದಿಲ್ಲ. ಅಮೆರಿಕದಲ್ಲಿ ಧನ ಸಂಪಾದಿಸಿ ಅದರಿಂದ ಭಾರತದ ಕೆಲಸ ಮಾಡಬೇಕೆಂದು ಅವರು ನಿರ್ಧಾರ ಮಾಡಿದರು. ೧೮೯೩, ಸೆಪ್ಟೆಂಬರ್‌ನಲ್ಲಿ ಶಿಕಾಗೋ ನಗರದಲ್ಲಿ ವಿಶ್ವಧರ್ಮ ಸಮ್ಮೇಳನವನ್ನು ನಡೆಸುವ ಯೋಜನೆ ಸಿದ್ಧವಾಗಿತ್ತು. ಅದರಲ್ಲಿ ಭಾಗವಹಿಸಿ ಹಿಂದೂಧರ್ಮವನ್ನು ಪ್ರತಿನಿಧಿಸುವ ನಿರ್ಧಾರವನ್ನು ಕೈಗೊಂಡರು.

ಅಮೆರಿಕಕ್ಕೆ ಹೊರಡುವ ಮೊದಲು ವಿವೇಕಾನಂದರು ತಮ್ಮ ಗುರುಭಾಯಿ ಸ್ವಾಮಿ ತುರೀಯಾನಂದರಿಗೆ ಮೇ ೧೮೯೩ರಲ್ಲಿ ಹೇಳಿದ್ದರು: 'ಹರಿಭಾಯಿ (ತುರೀಯಾನಂದರ ಪೂರ್ವಾಶ್ರಮದ ಹೆಸರು ಹರಿನಾಥ), ನೀವು ಧರ್ಮ ಎಂದು ಕರೆಯುವುದರ ವಿಷಯ ನನಗೆ ಅರ್ಥ ಆಗಿಲ್ಲ.' ಆಮೇಲೆ ಆಳವಾದ ಮರುಕದ ಭಾವದಿಂದ, ಅನುಕಂಪ ಶರೀರವನ್ನೇ ನಡುಗಿಸುತ್ತಿರಲು ಮುಂದುವರಿದರು: 'ಆದರೆ ನನ್ನ ಹೃದಯ ಬಹು ವಿಕಾಸ ಹೊಂದಿದೆ, ನನಗೆ ಅನುಕಂಪ ತೋರಿಸುವುದು ತಿಳಿದಿದೆ, ನನ್ನನ್ನು ನಂಬು, ನಾನು ಉತ್ಕಟವಾಗಿ ಅನುಕಂಪೆಯನ್ನು ಅನುಭವಿಸುತ್ತೇನೆ.' ಇಬ್ಬರೂ ಮೂಕರಾದರು, ಅವರಿಬ್ಬರ ಕಣ್ಣುಗಳೂ ಒದ್ದೆಯಾದವು. ಮೇ ೩೧ರಂದು ವಿವೇಕಾನಂದರು ಮುಂಬೈನಲ್ಲಿ ಹಡಗು ಹತ್ತಿದರು.

ವಿಶ್ವಧರ್ಮ ಸಮ್ಮೇಳನದಲ್ಲಿ ಅವರಾಡಿದ ಮೊದಲ ಐದು ಪದಗಳೇ ಸಹಸ್ರಾರು ಜನರ ಸಭೆಯನ್ನು ಆಕರ್ಷಿಸಿದವು. '*Sisters and brothers of America*' ಎಂದು ಹೇಳಿದಾಗಲೇ ಜನರು ಎದ್ದು ನಿಂತು ಚಪ್ಪಾಳೆ ಬಾರಿಸಿ ಅವರನ್ನು ಅಭಿನಂದಿಸಿದರು. ಅವರ ಭವ್ಯ ವ್ಯಕ್ತಿತ್ವ ಜನರ ಮೇಲೆ ತನ್ನ ಪ್ರಭಾವ ಬೀರಿತ್ತು. ಇಡೀ ವಿಶ್ವದ ಜನರು ತನ್ನ ಸೋದರ ಸೋದರಿಯರು ಎಂಬ ಅವರ ಅನುಭವಾತ್ಮಕ ದೃಢನಂಬಿಕೆ ಅಲ್ಲಿ ಎಲ್ಲರಿಗೂ ಮನದಟ್ಟಾಗಿತ್ತು.

ವಿಶ್ವಧರ್ಮ ಸಮ್ಮೇಳನದಲ್ಲಿ ಅವರು ಹಿಂದೂಧರ್ಮದ ಸಾರ್ವತ್ರಿಕ ಭಾವನೆಗಳನ್ನು ವಿವರಿಸಿ ಹೇಳಿದರು. ಅವರ ಮಾತುಗಳು ಎಲ್ಲ ಧರ್ಮಗಳ ಸೌಹಾರ್ದದ ಅಗತ್ಯವನ್ನು ಒತ್ತಿ ಹೇಳುತ್ತವೆ. ತಮ್ಮ ಅಂತಿಮ ಭಾಷಣದಲ್ಲಿ ಅವರು ಹೇಳುತ್ತಾರೆ: 'ಯಾರು ಎಷ್ಟೇ ವಿರೋಧಿಸಿದರೂ, ಪ್ರತಿಯೊಂದು ಧರ್ಮದ ಧ್ವಜದ ಮೇಲೆಯೂ ಶೀಘ್ರದಲ್ಲಿಯೇ ಈ ಮಾತುಗಳು ಬರೆಯಲ್ಪಡುತ್ತವೆ. . . "ಹೋರಾಟವಲ್ಲ, ಸೌಹಾರ್ದ" "ವಿನಾಶವಲ್ಲ, ಸ್ವೀಕಾರ", "ವೈಮನಸ್ಯ ಅಲ್ಲ,



## ಚಿಕಾಗೋದ Art Instituteನಲ್ಲಿರುವ ಫಲಕದ ಮೇಲಿರುವ ಬರಹ

**ಈ ಸ್ಥಳದಲ್ಲಿ, ಸೆಪ್ಟಂಬರ್ ೧೧ ರಿಂದ ೨೭ ರವರೆಗೆ, ಅಮೆರಿಕದಲ್ಲಿ ವೇದಾಂತವನ್ನು ಬೋಧಿಸಿದ ಪ್ರಥಮ ಹಿಂದೂ ಸಂನ್ಯಾಸಿಗಳಾದ ಸ್ವಾಮಿ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಅವರ ಅಭೂತಪೂರ್ವ ಯಶಸ್ಸು ಪ್ರಾಚ್ಯ ಮತ್ತು ಪಾಶ್ಚಾತ್ಯ ಧರ್ಮಗಳ ನಡುವೆ ವಿಚಾರ ವಿನಿಮಯಕ್ಕೆ ದಾರಿ ಮಾಡಿಕೊಟ್ಟಿತು.**

ಸಾಮರಸ್ಯ ಮತ್ತು ಶಾಂತಿ.''

### ಸಣ್ಣತನದ ಭರ್ತ್ಸನೆ

ಸಣ್ಣತನ ವಿವೇಕಾನಂದರ ಸ್ವಭಾವಕ್ಕೆ ವಿರುದ್ಧವಾದದ್ದು. ಉದಾರತೆ ಅವರ ನೈಜ ಗುಣ. ಮದರಾಸಿನಿಂದ ಆಳಸಿಂಗ ಪೆರುಮಾಳರು ಅವರಿಗೆ ಬರೆದು, ವಿವೇಕಾನಂದರ ಆಚಾರ ವ್ಯವಹಾರಗಳ ವಿಷಯವಾಗಿ ಅಪಪ್ರಚಾರ ನಡೆದಿದೆ ಎಂದು ತಿಳಿಸಿದಾಗ, ಕೆರಳಿದ ವಿವೇಕಾನಂದರು ೧೮೯೫ರಲ್ಲಿ ಪ್ಯಾರಿಸ್ಸಿನಿಂದ ಆಳಸಿಂಗರಿಗೆ ಬರೆಯುತ್ತಾರೆ : '...ನನಗೆ ನನ್ನ ಜೀವನೋದ್ದೇಶ ಏನು ಎಂಬುದು ಗೊತ್ತು. ನನ್ನಲ್ಲಿ ಸಂಕುಚಿತ ದೇಶಪ್ರೇಮ ಇಲ್ಲ; ನಾನು ಭಾರತಕ್ಕೆ ಎಷ್ಟರಮಟ್ಟಿಗೆ ಸೇರಿದ್ದೇನೆಯೋ ಅಷ್ಟೇ ಪ್ರಮಾಣದಲ್ಲಿ ಪ್ರಪಂಚಕ್ಕೂ ಸೇರಿದ್ದೇನೆ... ವಿದ್ಯಾವಂತ ಹಿಂದೂಗಳಲ್ಲಿ ಸಿಗುವ ಆ ಜಾತಿಬದ್ಧರಾದ, ಮೂಢನಂಬಿಕೆ ಹೊಂದಿದ, ನಿಷ್ಕರುಣೆಗಳಾದ, ಆಷಾಢಭೂತಿ, ನಾಸ್ತಿಕ, ಹೇಡಿಗಳ ನಡುವೆಯೇ ಬದುಕಿ ಸಾಯುವುದಕ್ಕಾಗಿ ನಾನು ಜನ್ಮ ತಳೆದಿದ್ದೇನೆಂದು ಹೇಳುತ್ತೀಯೇನು? ನನಗೆ ಹೇಡಿತನದ ಮೇಲೆ ತಾತ್ಸಾರ; ಹೇಡಿಗಳೊಡನೆ, ರಾಜಕೀಯ ಅಪದ್ಧದೊಡನೆ ನನಗೆ ಯಾವ ಸಂಬಂಧವೂ ಬೇಡ. ನಾನು ಯಾವ ರಾಜಕೀಯವನ್ನೂ ನಂಬುವುದಿಲ್ಲ. ದೇವರು ಮತ್ತು ಸತ್ಯ ಇವೆರಡೇ ಪ್ರಪಂಚದಲ್ಲಿರುವ ನಿಜವಾದ ರಾಜಕೀಯ—ಉಳಿದುದೆಲ್ಲ ಕನಸು.'

> **"ನಾನು ಭಾರತಕ್ಕೆ ಎಷ್ಟರ ಮಟ್ಟಿಗೆ ಸೇರಿದ್ದೇನೆಯೋ ಅಷ್ಟೇ ಪ್ರಮಾಣದಲ್ಲಿ ಪ್ರಪಂಚಕ್ಕೂ ಸೇರಿದ್ದೇನೆ..."**

### ವಿವೇಕಾನಂದರ ವಿಕಾಸ

೧೮೯೬ರ ಜುಲೈ ತಿಂಗಳಲ್ಲಿ ಫ್ರಾನ್ಸಿಸ್ ಲೆಗೆಟ್‌ಗೆ ಬರೆದ ಪತ್ರದಲ್ಲಿ ವಿವೇಕಾನಂದರು ತಾವು ಹೇಗೆ ವಿಕಾಸ ಹೊಂದಿದರೆಂಬುದನ್ನು ತಾವೇ ಗುರುತಿಸಿದ್ದಾರೆ : 'ನನಗೆ ಇಪ್ಪತ್ತು ವಯಸ್ಸಾಗಿದ್ದಾಗ ಅತ್ಯಂತ ಅನುಕಂಪಾ ವಿಹೀನನಾಗಿದ್ದೆ. ಎಂದಿಗೂ ರಾಜಿಯಾಗದ ಧರ್ಮಾಂಧನೂ ಆಗಿದ್ದೆ. ಕಲ್ಕತ್ತಾ ನಗರದಲ್ಲಿ ನಾಟಕಶಾಲೆಗಳಿರುವ ದಾರಿಯ ಪಕ್ಕದಲ್ಲಿ ಕೂಡ ನಡೆಯುತ್ತಿರಲಿಲ್ಲ. ನನ್ನ ಮೂವತ್ತೂರನೆಯ ವಯಸ್ಸಿನಲ್ಲಿ ವೇಶ್ಯಾಂಗನೆಯರನ್ನೂ ಕೂಡ ಒಮ್ಮೆಯಾದರೂ ನಿಂದೆಯ ಮಾತುಗಳಿಂದ ನೋಯಿಸುವುದನ್ನು ಸಹಿಸಲಾರೆ. ಇದೇನು ಹೀನ ಸ್ಥಿತಿಯೋ? ಅಥವಾ ನಾನೂ ದೇವತಾ ಸ್ವರೂಪವಾದ ವಿಶ್ವಪ್ರೇಮದ ಸ್ಥಿತಿಗೆ ವಿಕಾಸವಾಗುತ್ತಿರುವೆನೋ?... ನನಗೆ ಎಲ್ಲರನ್ನೂ, ಪ್ರತಿ ವಸ್ತುವನ್ನೂ ಹರಸಬೇಕೆಂದೆನಿಸುತ್ತದೆ, ಎಲ್ಲವನ್ನೂ ಪ್ರೀತಿಸಿ ಆಲಿಂಗಿಸಬೇಕೆಂದೆನಿಸುತ್ತದೆ.'

೧೮೯೭ರಲ್ಲಿ ಮೇರಿ ಹೇಲ್‌ಗೆ ಬರೆದ ಪತ್ರದಲ್ಲಿ ವಿವೇಕಾನಂದರು ಹೀಗೆ ಹೇಳುತ್ತಾರೆ : 'ನಾನು ಯಾರು? ಏಷ್ಯಾದವನೆ, ಯೂರೋಪಿಯನ್ನನೆ, ಅಮೆರಿಕದವನೆ? ನನ್ನಲ್ಲಿ ಹಲವು ವ್ಯಕ್ತಿತ್ವಗಳು ವಿಚಿತ್ರವಾಗಿ ಸೇರಿಹೋಗಿವೆ.' ಈ ಮಾತುಗಳನ್ನು ಓದುವಾಗ ಬಸವಣ್ಣನವರ ಈ ವಚನ ನೆನಪಿಗೆ ಬರುತ್ತದೆ : 'ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ, ಕೂಡಲ ಸಂಗಮದೇವಾ, ನಿನ್ನ ಮನೆಯ ಮಗನೆನಿಸಯ್ಯಾ.'

### ವಿಶ್ವಪ್ರೇಮ

ಎಲ್ಲ ಸಂಕುಚಿತ ಭಾವನೆಗಳನ್ನೂ ಹಿಂದಿರಿಸಿ ಇಡೀ ವಿಶ್ವವನ್ನೇ ತನ್ನ ಆರಾಧ್ಯ ದೈವವನ್ನಾಗಿ ಮಾಡಿಕೊಂಡರು ವಿವೇಕಾನಂದರು.

೧೮೯೪ರಲ್ಲಿ ಸೋದರ ಸಂನ್ಯಾಸಿಗಳಿಗೆ ಬರೆದರು : 'ಶ್ರೀರಾಮಕೃಷ್ಣರು ನಿಮ್ಮನ್ನು ಪ್ರೀತಿಸಿದ್ದ ಹಾಗೆ, ನಾನು ನಿಮ್ಮನ್ನು ಪ್ರೀತಿಸುವ ಹಾಗೆ, ಬನ್ನಿ, ಪ್ರಪಂಚವನ್ನೇ ಪ್ರೀತಿಸಿ.'

೧೮೯೫ರಲ್ಲಿ ತಮ್ಮ ಶಿಷ್ಯ ಇ.ಟಿ. ಸ್ಟರ್ಡಿಗೆ ಬರೆದರು: '...ಇನ್ನೊಂದು ಮಾತು. ನಿಸ್ಸಂದೇಹವಾಗಿ ನಾನು ಭಾರತವನ್ನು ಪ್ರೀತಿಸುತ್ತೇನೆ. ಆದರೆ ದಿನ ದಿನಕ್ಕೂ ನನ್ನ ದೃಷ್ಟಿ ಸ್ಪಷ್ಟತರವಾಗುತ್ತಿದೆ. ನಮಗೆ ಭಾರತದಿಂದ ಏನು, ಅಥವಾ ಇಂಗ್ಲೆಂಡಿನಿಂದ, ಅಮೆರಿಕದಿಂದ ಏನು? ಯಾರನ್ನು ಅಜ್ಞಾನಿ ಜನರು ಮನುಷ್ಯ ಎಂದು ಕರೆಯುತ್ತಾರೆಯೋ ಆ ದೇವರ ಸೇವಕರು ನಾವು.'

ಮತ್ತೆ ಅವರು ಹೇಳಿದರು: 'ವಿಶ್ವ ಒಂದು ಪ್ರತೀಕ. ಭಗವಂತನೇ ಅದರ ಸಾರ.'

*ಅಮೆರಿಕದ ಮೊದಲ ಪ್ರವಾಸದ ನಂತರ ಕಲ್ಕತ್ತೆಗೆ ಬಂದಿದ್ದಾಗ ಬಲರಾಮ ಮಂದಿರದಲ್ಲಿದ್ದರು. ತುರೀಯಾನಂದರು ಸ್ವಾಮೀಜಿಯನ್ನು ನೋಡಲು ಅಲ್ಲಿಗೆ ಬಂದರು. ಸ್ವಾಮೀಜಿ ಗಾಢವಾದ ಆಲೋಚನೆಯಲ್ಲಿ ಮುಳುಗಿ ವರಾಂಡದಲ್ಲಿ ಶತಪಥ ಹಾಕುತ್ತಿದ್ದರು. ತುರೀಯಾನಂದರು ಬಂದದ್ದು ಅವರಿಗೆ ಕಾಣಿಸಲಿಲ್ಲ. ತುರೀಯಾನಂದರೂ ಅವರ ಆಲೋಚನಾ ಸರಣಿಯನ್ನು ಭಂಗಗೊಳಿಸಲಿಲ್ಲ, ಮರೆಯಿಂದ ನೋಡುತ್ತಿದ್ದರು. ಸ್ವಲ್ಪ ಕಾಲದ ನಂತರ ಧಾರಾಕಾರವಾಗಿ ಕಣ್ಣೀರು ಸುರಿಸುತ್ತಾ ಸ್ವಾಮೀಜಿ ಮೀರಾಬಾಯಿಯ ಒಂದು ಹಾಡನ್ನು ಹಾಡಲಾರಂಭಿಸಿದರು. ಕಟಕಟೆಗೆ ತಮ್ಮ ದೇಹವನ್ನು ಒರಗಿಸಿಕೊಂಡು, ಕೈಗಳಲ್ಲಿ ಮುಖವನ್ನಿರಿಸಿ ನೊಂದ ಧ್ವನಿಯಲ್ಲಿ ಸಂತಾಪದೊಡನೆ ಹಾಡಿದರು: 'ಮೇರಾ ದರ್ದ ನ ಜಾನೇ ಕೋಯಿ, ಮೇರಾ ದುಃಖ ನ ಜಾನೇ ಕೋಯಿಅ'( ನನ್ನ ನೋವನ್ನು, ದುಃಖವನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ ). ಅವರ ದುಃಖ ಸುತ್ತಲಿನ ಜಡವಸ್ತುಗಳನ್ನೂ ಪ್ರಭಾವಗೊಳಿಸಿದಂತೆ ಇತ್ತು. ಆ ವಾತಾವರಣವೆಲ್ಲ ದುಃಖಪೂರಿತ ಭಾವದಿಂದ ಪರಿತಪ್ತವಾಗಿದ್ದಿತು. 'ಘಾಯಲ ಕೀ ಗತಿ ಘಾಯಲ ಜಾನೇ, ಜೋ ಕೋಯಿ ಘಾಯಲ ಹೋಯ' (ಯಾರಿಗೆ ಘಾಯವಾಗಿರುತ್ತದೋ ಅವರು ಮಾತ್ರ ಘಾಯದ ನೋವನ್ನು ಅರಿಯಬಲ್ಲರು ). ತುರೀಯಾನಂದರು ಹೇಳುತ್ತಾರೆ : 'ಅವರ ಧ್ವನಿ ನನ್ನ ಹೃದಯವನ್ನು ಬಾಣದಂತೆ ಬಂದು ಇರಿಯಿತು. ಅವರ ದುಃಖದ ಕಾರಣ ಏನೆಂದು ಕಾಣದೆ ಪರಿತಪಿಸಿದೆ. ಆಗ ಹೊಳೆಯಿತು, ಪ್ರಬಲವಾದ ವಿಶ್ವವ್ಯಾಪಿ ಅನುಕಂಪ, ದಲಿತರ ದುಃಖಕ್ಕಾಗಿ ಅವರ ವ್ಯಥೆ ಎಂದು. ಇದೇ ಸ್ವಾಮೀಜಿಯ ಭಾವ ಎಂದು ಗೋಚರಿಸಿತು.'*

ವಿಶ್ವದ ಎಲ್ಲ ಧರ್ಮಗಳನ್ನೂ ಅವರು ಸ್ವೀಕರಿಸಿದರು. ೧೯೦೦ರಲ್ಲಿ ಕೆಲಿಫೋರ್ನಿಯಾದ ಪೇಸಡಿನಾದಲ್ಲಿ ಮಾಡಿದ ಭಾಷಣದ ಕೊನೆಯ ಭಾಗದಲ್ಲಿ ಹೇಳಿದರು: 'ನಾನು ಹಿಂದೆ ಇದ್ದ ಧರ್ಮಗಳನ್ನೆಲ್ಲ ಸ್ವೀಕರಿಸುತ್ತೇನೆ. ಆ ಧರ್ಮೀಯರೊಂದಿಗೆ ನಾನು ಆರಾಧಿಸುತ್ತೇನೆ. ಅವರು ಯಾವ ರೀತಿ ದೇವರನ್ನು ಪೂಜಿಸುವರೋ ಅದೇ ರೀತಿ ಅವನನ್ನು ಆರಾಧಿಸುತ್ತೇನೆ. ನಾನು ಮಹಮ್ಮದೀಯರ ಮಸೀದಿಗೆ ಹೋಗುತ್ತೇನೆ. ಕ್ರೈಸ್ತರ ಚರ್ಚಿನಲ್ಲಿ ಶಿಲುಬೆ ಎದುರಿಗೆ ಬಾಗುತ್ತೇನೆ. ಬೌದ್ಧರ ವಿಹಾರಕ್ಕೆ ಹೋಗಿ ಬುದ್ಧನಲ್ಲಿ, ಧರ್ಮದಲ್ಲಿ ಶರಣಾಗುತ್ತೇನೆ. ಹಿಂದೂಗಳೊಂದಿಗೆ ಕಾಡಿಗೆ ಹೋಗಿ ಎಲ್ಲರಲ್ಲೂ ಬೆಳಗುತ್ತಿರುವ ಪರಂಜ್ಯೋತಿಯ ದರ್ಶನಕ್ಕಾಗಿ ಧ್ಯಾನ ಮಾಡುವವರೊಂದಿಗೆ ನಾನೂ ಧ್ಯಾನಮಗ್ನನಾಗುತ್ತೇನೆ.

'ಇಷ್ಟೇ ಅಲ್ಲ. ಭವಿಷ್ಯದಲ್ಲಿ ಇನ್ನೇನು ಬರುವುದೋ ಅದಕ್ಕೆಲ್ಲ ನನ್ನ ಹೃದಯವನ್ನು ತೆರೆದಿರುತ್ತೇನೆ. ಭಗವಂತನ ಗ್ರಂಥ ಅಂತ್ಯವಾಯಿತೇನು?... ಹಿಂದಿನ ಮಹಾತ್ಮರಿಗೆಲ್ಲ ವಂದನೆ. ಈಗಿರುವ ಮಹಾತ್ಮರಿಗೆ ವಂದನೆ. ಮುಂದೆ ಬರಲಿರುವ ಮಹಾತ್ಮರಿಗೂ ವಂದನೆ.' 'ಎಂದರೋ ಮಹಾನುಭಾವುಲು ಅಂದರಿಕಿ ವಂದನಮುಲು'— ಎಂದರು, ತ್ಯಾಗರಾಜರ ಹಾಗೆ.

## ಗುರಿ

ಹಿಮಾಲಯದ ಮಾಯಾವತಿಯಲ್ಲಿ ವಿವೇಕಾನಂದರು ಅದ್ವೈತ ಆಶ್ರಮದ ಸ್ಥಾಪನೆ ಮಾಡಿದರು. ಆಗ, ನೂರು ವರ್ಷಗಳ ಹಿಂದೆ, ಅವರು ಕೊಟ್ಟ ಸಂದೇಶ :

'ಈ ಸತ್ಯ(ಅದ್ವೈತ)ಕ್ಕೆ ಹೆಚ್ಚು ಉದಾರವಾದ, ಪೂರ್ಣವಾದ, ಪೂರ್ಣತರವಾದ ಅಭಿವ್ಯಕ್ತಿ ಕೊಟ್ಟು ವ್ಯಕ್ತಿಗಳ ಉದ್ಧಾರ ಮಾಡಲು, ಮಾನವತೆಯಲ್ಲಿ ಸಾರವನ್ನು ಹೆಚ್ಚಿಸಲು, ಈ ಅದ್ವೈತ ಆಶ್ರಮವನ್ನು ಹಿಮಾಲಯದ ಎತ್ತರದಲ್ಲಿ ಆರಂಭಿಸುತ್ತಿದ್ದೇವೆ.'

ತಮ್ಮ ರಾಜಯೋಗ ಗ್ರಂಥಕ್ಕೆ ಪ್ರಸ್ತಾವನೆಯಾಗಿ ವಿವೇಕಾನಂದರು ಬರೆದರು:

- 'ಪ್ರತಿಯೊಂದು ಆತ್ಮದ ಸ್ವರೂಪವೂ ದಿವ್ಯತೆ.
- 'ಆಂತರಿಕ ಮತ್ತು ಬಾಹ್ಯ ಪ್ರಕೃತಿಯನ್ನು ನಿಯಂತ್ರಿಸುವುದರ ಮೂಲಕ ಒಳಗಿರುವ ದಿವ್ಯತೆಯನ್ನು ಪ್ರಕಟಗೊಳಿಸುವುದೇ ಗುರಿ.
- 'ಇದನ್ನು ಕರ್ಮ ಅಥವಾ ಭಕ್ತಿ ಅಥವಾ ರಾಜಯೋಗ ಅಥವಾ ಜ್ಞಾನ ಇವುಗಳಲ್ಲಿ ಒಂದು ಅಥವಾ ಹೆಚ್ಚು ಅಥವಾ ಎಲ್ಲ ಮಾರ್ಗಗಳಿಂದ ಸಾಧಿಸಿ ಮುಕ್ತರಾಗಿ.
- 'ಇದೇ ಧರ್ಮದ ಸಾರಸರ್ವಸ್ವ. ಸಿದ್ಧಾಂತಗಳು, ನಿಯಮಗಳು, ಆಚಾರಗಳು, ಶಾಸ್ತ್ರಗ್ರಂಥಗಳು, ದೇವಸ್ಥಾನಗಳು, ಮೂರ್ತಿಗಳು ಇವೆಲ್ಲ ಬರಿಯ ವಿವರಗಳು ಮಾತ್ರ, ಗೌಣ.'

ಹೀಗೆ ಸ್ವಾಮೀಜಿ ವಿಶ್ವವ್ಯಾಪಿಯಾಗಬಹುದಾದ ಧರ್ಮದ ಒಂದು ಸ್ವರೂಪವನ್ನು ನಮ್ಮೆದುರಿಗೆ ಇರಿಸಿದ್ದಾರೆ. ಸ್ವಾಮಿ ಭೂತೇಶಾನಂದಜೀ ಮಹಾರಾಜರು (ರಾಮಕೃಷ್ಣ ಸಂಘದ ೧೨ನೇ ಅಧ್ಯಕ್ಷರು)ತಮ್ಮ ಜೀವನದ ಕಡೆಯ ಭಾಷಣಗಳೊಂದರಲ್ಲಿ ಮಾತನಾಡುತ್ತಾ 'ವಿವೇಕಾನಂದರ ದೃಷ್ಟಿ ಎಂತಹುದಾಗಿತ್ತೆಂದರೆ ಅದು ಯಾವುದೇ ಒಂದು ರಾಷ್ಟ್ರ ಅಥವಾ ಜನಾಂಗಕ್ಕೆ ಸೀಮಿತವಾಗಿರಲಿಲ್ಲ, ಆದರೆ ಇಡೀ ಮಾನವ ಕುಲವನ್ನೇ ವ್ಯಾಪಿಸಿತ್ತು.'ಎಂದು ನುಡಿದಿದ್ದಾರೆ. (ನೋಡಿ, *The Ideals of Swami Vivekananda*, Prabuddha Bharata, March 1999) ಸ್ವಾಮಿ ವಿವೇಕಾನಂದರು ಸಹಜವಾಗಿಯೇ ವಿಶ್ವ ಮಾನವರಾಗಿದ್ದರು. ◆